

**ಎಡದಿಂದ ಬಲಕ್ಕೆ**

1. ಇಂಥ ಅಪ್ರತಿಮ ಸ್ವರೂಪ ತುಂಬ ವಿರಳ ಬಿಡಿ 4
3. ಸಹನೆಯನ್ನು ಗರಿಷ್ಠ ಪರೀಕ್ಷಿಸುವ ಭಾರೀ ಧೈರ್ಯವಂತರ ಕೆಲಸ 3
4. ಸಹಾಯ ಕೋರಿದವರಿಗೆ ಸಾಂತ್ವನ ನೀಡಿದ್ದು ಅರಸ ಬರೆದ ಪತ್ರ 3
6. ಪಾರಿವಾಳಗಳ ಗುಂಪಿನಿಂದ ಇದೆಂಥ ಸುವಾಸನೆ? 4
7. ಮರ್ಕಟದ ಕೈಗೆ ಹೇಗೆ ಬಂತು ಈ ಅಮೂಲ್ಯ ಮಣಿ? 4
9. ದ್ವಾಪರ ಯುಗದಂತೆಯೇ ಇದು ಸದ್ಯದ ಹೊಸ ಕಾಲಾವಧಿ 4
12. ನಯವಾದ ಮಾತುಗಳಿಂದಲೇ ಪ್ರಸಿದ್ಧ ಈ ವಕೀಲ 4
14. ತಿರುಗಿ ತಿರುಗಿ ಮಣ್ಣಿನಿಂದ ಮಡಿಕೆ ಮಾಡುವ ಚಕ್ರ 3
15. ಪಲ್ಲಂಗವನ್ನೇ ಕದ್ದು ಸಾಗಿಸಿದ ಪುಂಡ ಮನುಷ್ಯ 3
16. ಶೂರರಾದ ದೇವತೆಗಳ ವಿಶಾಲ ನಿವಾಸ 4

**ಮೇಲಿನಿಂದ ಕೆಳಕ್ಕೆ**

1. ಅವಳ ಮನದ ಆಸೆಗಳಿಗೆ ಹೋಲಿಕೆಯೇ ಇಲ್ಲ 4
2. ಪರಕೀಯರ ಆಕ್ರಮಣವನ್ನು ಹಿಮ್ಮೆಟ್ಟಿಸಲು ಬೇಕಾದ ಶಕ್ತಿ, ಶೌರ್ಯ 4
3. ವಿರಸವೇರ್ಪಟ್ಟಿದ್ದನ್ನು ಶಮನಗೊಳಿಸಿದ ಸಂಗೀತ ರಾಗ 3
5. ಇಂಥ ಶೌರ್ಯದ ಕೆಲಸವನ್ನು ಮಾಡಿದವನಿಗೆ ಸಮಾನ ಯಾರು? 3
6. ಪಾಳಿಯನ್ನು ಬದಲಿಸಿದೊಡನೆ ಓಡಿಹೋಗುವುದೇ? 4
8. ಆಳ ಹಳ್ಳ ತೆಗೆದಿಟ್ಟು ನಿರ್ಮಿಸಿದ ಭದ್ರ ಅಡಿಪಾಯ 4
10. ಸುತ್ತಿ ಬರುವವರಿಗೆ ಉಳಿದುಕೊಳ್ಳಲು ಸೂಕ್ತ ಜಾಗ 3
11. ಗದ್ದಲ ಎಬ್ಬಿಸಲು ಬಂದವರನ್ನು ಬೈದು ಹೆದರಿಸು 4
12. ಅನ್ಯಾಯವನ್ನು ಸರಿಪಡಿಸುವ ಕಾರ್ಯ ನಡೆಯುವ ಪ್ರಸಿದ್ಧ ಮನೆ 4
13. ಉಲ್ಲಾಸವಾಗಿರಲು ಬಯಸಿದರೆ ತಕ್ಕದ್ದು ಈ ಮಂಗಳ ವಾದ್ಯ 3

## 26–10–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಧಿಪತಿ 3. ನೀರವ 4. ರುಸುಮು 6. ನಿರ್ಧಾರಕ 7. ಸದಾಕಾಲ 8. ನಸುನಗು 10. ನವ್ಯಕಾವ್ಯ 12. ಪರಿಕರ 14. ಅಮಾಯಕ 16. ನುಸುಳು 17. ವಿಹಾರ 18. ಕುಟಿಲತೆ

**ಮೇಲಿನಿಂದ ಕೆಳಕ್ಕೆ**

1. ಅವನಿ 2. ತಿರುಕ 3. ನೀಳಕಾಯ 5. ಮುನಿಸು 7. ಸಮಾಧಾನ 9. ಗುರುತರ 11. ಕಾನೂನು 13. ಸರಿದಾರಿ 14. ಅಳುಕು 15. ಕವಿತೆ

ಪ್ರಶ್ನಾಂಕಣ

# ಕೃತಕ ಭೂ ಉಪಗ್ರಹ: ಎಲ್ಲೆಲ್ಲಿ ಎಷ್ಟೆಷ್ಟು?

ಅತ್ಯಂತ ಇತ್ತೀಚಿನ ಅಂಕಿಅಂಶಗಳ ಪ್ರಕಾರ ಪ್ರಸ್ತುತ ಭೂಮಿಯನ್ನು ಪರಿಭ್ರಮಿಸುತ್ತಿರುವ ಕ್ರಿಯಾಶೀಲ ಉಪಗ್ರಹಗಳ ಸಂಖ್ಯೆ 7832 ( ಚಿತ್ರ1). ಅಲ್ಲಿಂದ ಈವರೆಗೆ ಮತ್ತೂ ಹತ್ತಾರು ಉಪಗ್ರಹಗಳು ಸೇರ್ಪಡೆಗೊಂಡಿವೆ. ಪ್ರಪಂಚದ ಒಟ್ಟು 195 ದೇಶಗಳ ಪೈಕಿ 105 ರಾಷ್ಟ್ರಗಳಿಗೆ ಈ ಉಪಗ್ರಹಗಳು ಸೇರಿವೆ. ವಿಶೇಷ ಏನೆಂದರೆ, ವಿವಿಧ ಗಾತ್ರಗಳಲ್ಲಿ, ವಿವಿಧ ಉದ್ದೇಶಗಳಿಗಾಗಿ ಧರೆಯನ್ನು ಪರಿವರಿಸಿ ಪರಿಭ್ರಮಿಸುತ್ತಿರುವ ಇಷ್ಟೂ ಉಪಗ್ರಹಗಳು ಆಕಾಶದಲ್ಲಿ ಒಂದೇ ಎತ್ತರದಲ್ಲಿ ಭೂಮಿಯನ್ನು ಸುತ್ತುತ್ತಿಲ್ಲ; ಮೂರು ವಿಭಿನ್ನ ವರ್ಗಗಳ ಪಥಗಳಲ್ಲಿ ಅವು ಹರಡಿಕೊಂಡಿವೆ.

1. ಕೆಳ ಭೂ ಪಥ (LEO: Low Earth Orbits): ಸಾಗರ ಮಟ್ಟದಿಂದ 160 ಕಿ.ಮೀ.ನಿಂದ 2000 ಕಿ.ಮೀ. ಎತ್ತರಗಳ ನಡುವಣ ಪ್ರದೇಶದ ಈ ಪಥಗಳು ಗರಿಷ್ಠ ಬಳಕೆಯಲ್ಲಿವೆ. ಎಷ್ಟೆಂದರೆ ಒಟ್ಟು ಉಪಗ್ರಹಗಳ ಶೇ. 84ರಷ್ಟು ಸಂಖ್ಯೆ ಈ ವರ್ಗದ ಪಥಗಳಲ್ಲೇ ಇವೆ! ಈ ಪಥಗಳ ಉಪಗ್ರಹಗಳು ಪ್ರತಿ 90 ನಿಮಿಷಗಳಿಂದ ಎರಡು ತಾಸುಗಳಲ್ಲಿ ಒಮ್ಮೆ ಭೂಮಿಯನ್ನು ಸುತ್ತಿ ಬರುತ್ತವೆ. ಭೂ ವೀಕ್ಷಣೆ, ದೂರ ಸಂವೇದನೆ (Remote Sensing), ಹವಾ ಅಧ್ಯಯನ, ದೂರ ಸಂಪರ್ಕ, ಅಂತರ್ಜಾಲ ಸೇವೆಗಳು,... ಇತ್ಯಾದಿಗಳಿಗೆ ಬಳಸುವ ಉಪಗ್ರಹಗಳಿಗೆ ಈ ಪಥಗಳು ಅತ್ಯಂತ ಸೂಕ್ತ.

2. ಮಧ್ಯಮ ಭೂ ಪಥ (MEO: Medium Earth Orbits): ಸಾಗರ ಮಟ್ಟದಿಂದ 2000 ಕಿ.ಮೀ ನಿಂದ 35,786 ಕಿ.ಮೀ ಎತ್ತರಗಳ ನಡುವಣ ಪಥಗಳು ಈ ವರ್ಗಕ್ಕೆ ಸೇರುತ್ತವೆ. ಧರೆಯ ವಿಶಾಲ ಪ್ರದೇಶಗಳ ವೀಕ್ಷಣೆಗೆ ಈ ಪಥಗಳು ಸೂಕ್ತ. ತುಂಬ ಕಡಿಮೆ ಬಳಕೆಯಲ್ಲಿರುವ ಈ ಪಥಗಳಲ್ಲಿರುವ ಉಪಗ್ರಹಗಳು ಶೇ.3ರಷ್ಟು ಮಾತ್ರ.

3. ಭೂ ಸ್ಥಿರ ಪಥ (GEO: Geostationary Orbits): ಸಾಗರ ಮಟ್ಟದಿಂದ 35,786 ಕಿ.ಮೀ ಉನ್ನತಿಯಲ್ಲಿ, ಭೂ ಸಮಭಾಜಕದ ನೇರದಲ್ಲಿನ ವೃತ್ತಾಕಾರದ ಪಥಗಳು ಇವು. ಈ ಪಥಗಳಲ್ಲಿ ಇರಿಸುವ ಉಪಗ್ರಹಗಳು ಭೂಮಿಯ ಜೊತೆ ಜೊತೆಗೇ ಅದೇ ವೇಗದಲ್ಲಿ, ಅದೇ ದಿಕ್ಕಿನಲ್ಲಿ ಭೂಮಿಯನ್ನು ಪರಿಭ್ರಮಿಸುತ್ತವೆ. ಹಾಗಾಗಿ ಅವು ಭೂಮಿಯ ಮೇಲಿನಿಂದ ಒಂದೇ ಸ್ಥಳದಲ್ಲಿ ಸ್ಥಿರವಾಗಿ ನಿಂತಿರುವಂತೆ ಕಾಣುತ್ತವೆ. ವಿಶೇಷವಾಗಿ ಮಾರ್ಗ ನಿರ್ದೇಶನದ ಜಿ.ಪಿ.ಎಸ್. ಉಪಗ್ರಹಗಳಿಗೆ ಈ ವರ್ಗದ ಪಥಗಳು ಸೂಕ್ತ. ಶೇ. 13ರಷ್ಟು ಉಪಗ್ರಹಗಳು ಈ ವರ್ಗದ ಪಥಗಳಲ್ಲಿವೆ.




ಇಷ್ಟೊಂದು ಉಪಗ್ರಹಗಳಲ್ಲಿ ನಿಷ್ಕ್ರಿಯವಾಗುವ, ಮೃತವಾಗುವ ಮತ್ತು ಪಥಗಳಿಂದ ವಿಚಲನೆಗೊಳ್ಳುವ ಉಪಗ್ರಹಗಳು ನೆಲದತ್ತ ಬೀಳತೊಡಗುತ್ತವೆ; ಅವೆಲ್ಲ ಬಹುಪಾಲು ಉನ್ನತ ವಾಯುಮಂಡಲದಲ್ಲೇ ಉಲ್ಕೆಗಳಂತೆ ಉರಿದು ಭಸ್ಮವಾಗುತ್ತವೆ. ಹಾಗಾಗದ ಬೃಹತ್ ಉಪಗ್ರಹಗಳನ್ನು (ಚಿತ್ರ2) ಪೆಸಿಫಿಕ್ ಸಾಗರದಲ್ಲಿರುವ ವ್ಯೋಮನೌಕೆಗಳ ಸ್ಮಶಾನಕ್ಕೆ (ಚಿತ್ರ3) ಬಂದು ಬೀಳುವಂತೆ ಮಾಡಲಾಗುತ್ತದೆ!

■ ಎನ್. ವಾಸುದೇವ್